# ಫಲವಿದು ಬಾಳ್ದುದಕೆ

ರಾಗ – ಪಂತುವರಾಳಿ     ಆದಿತಾಳ

ಫಲವಿದು ಬಾಳ್ದುದಕೆ ಸಿರಿ–ನಿಲಯನ ಗುಣಗಳ ತಿಳಿದು ಭಜಿಸುವದೆ । ಪ ।

ಸ್ವೋಚಿತ ಕರ್ಮಗಳಾಚರಿಸುತ ಬಲು ನೀಚರಲ್ಲಿಗೆ ಪೋಗಿ ಯಾಚಿಸದೆ

ಖೇಚರವಾಹ ಚರಾಚರ ಬಂಧಕ ಮೋಚಕನಹುದೆಂದ್ಯೋಚಿಸುತಿಪ್ಪೊದೆ ।೧।

ನಿಚ್ಚಸುಭಕುತಿಯೊಳಚ್ಯುತನಂಘ್ರಿಗಳರ್ಚಿಸಿ ಮೆಚ್ಚಿಸುತೆಚ್ಚರದಿ

ತುಚ್ಛವಿಷಯಗಳನಿಚ್ಚಿಸದಲೆ ಯದೃಚ್ಛಲಾಭದಿಂ ಪ್ರೋಚ್ಛನಾಗುವದೆ ।೨।

ಮನೋವಾಕ್ಕಾಯದೊಳನುಭವಿಸುವ  ದಿನದಿನದ ವಿಷಯಸಾಧನಗಳನು

ಅನಿಲಾಂತರ್ಗತ ವನರುಹದಳಲೋಚನಗರ್ಪಿಸಿ ದಾಸನು ನಾನೆಂಬೋದೆ ।೩।

ವಾಸವಮುಖವಿಬುಧಾಸುರನಿಚಯಕೆ ವಾಸುದೇವನೆ ಶುಭಾಶುಭದ

ಈ ಸಮಸ್ತಜಗಕೀಶ ಕೇಶವಾನೀಶ ಜೀವರೆಂಬೀ ಸುಜ್ಞಾನವೆ ।೪।

ಪಂಚಭೇದಯುತ ಪ್ರಪಂಚ ಸುಸತ್ಯ ವಿರಿಂಚಿಭವಮುಖರುಬಲಿವಂಚಕಗೆ

ಸಂಚಲ ಪ್ರತಿಮೆ ಅಚಂಚಲ ಪ್ರಕೃತಿಯು ಸಂಚಿಂತಿಸಿ ಮುದಲಾಂಛನನಾಹುದೆ ।೫।

ಪಂಚಋತುಗಳಲಿ ಪಂಚಾಗ್ನಿಗಳಲಿ ಪಂಚಪಂಚರೂಪವ ತಿಳಿದು

ಪಂಚಸುಸಂಸ್ಕಾರರಾಂಚಿತನಾಗಿ ದ್ವಿಪಂಚಕರಣದಲಿ ಪಂಚಕನರಿವುದೆ ।೬।

ಹೃದಯದಿ ರೂಪವು ವದನದಿ ನಾಮವು ಉದರದಿ ನೈವೇದ್ಯವು ಶಿರದಿ

ಪದಜಲ ನಿರ್ಮಾಲ್ಯವನೆ  ಧರಿಸಿ ಕೋವಿದರ ಸದನ ಹೆಗ್ಗದವ ಕಾಯ್ವುದೆ ।೭।

ಪಾತ್ರರ ಸಂಗಡ ಯಾತ್ರೆಯ ಚರಿಸಿ ವಿಧಾತೃಪಿತನ ಗುಣಸ್ತೋತ್ರಗಳ

ಶ್ರೋತ್ರದಿ ಸವಿದು ವಿಚಿತ್ರಾನಂದದಿ ಗಾತ್ರವ ಮರೆದು ಪಾರತ್ರಿಕ ಪಡೆವುದೆ ।೮।

ಹಂಸಮೊದಲು ಹದಿನೆಂಟು ರೂಪಗಳ ಸಂಸ್ಥಾನವ ತಿಳಿದನುದಿನದಿ

ಸಂಸೇವಿಸುವ ಮಹಾಪುರುಷರ ಪದ ಪಾಂಸುವ ಧರಿಸಿ ಅಸಂಶಯನಪ್ಪುದೆ ।೯।

ವರಗಾಯತ್ರೀನಾಮಕ ಹರಿಗೀರೆರಡಂಘ್ರಿಗಳ ವಿವರವ ತಿಳಿದು

ತರುವಾಯದಿ ಷಡ್ವಿಧರೂಪವ ಸಾದರದಲಿ ಧೇನಿಸಿ ನಿರುತ ಜಪಿಸುವದೆ ।೧೦।

ಬಿಗಿದ ಕಂಠದಿಂ ದೃಗ್ಬಾಷ್ಪಾಗಳಿಂ ನಗೆಮೊಗದಿಂ ರೋಮಗಳೊಗೆದು

ಮಿಗೆ ಸಂತೋಷದಿ ನೆಗೆದಾಡುತ ನಾಲ್ಮೊಗನಯ್ಯನ ಗುಣ ಪೊಗಳಿ ಹಿಗ್ಗುವದೆ ।೧೧।

ಗೃಹಕರ್ಮವ ಬ್ಯಾಸರದಲೆ ಪರಮೋತ್ಸಾಹದಲಿ ಮೂಡುತ ಮೂಜಗದ

ಮಹಿತನ ಸೇವೆಯಿದೆನುತಲಿ ಮೋದದಿ ಅಹರಹರ್ಮನದಿ ಸಮರ್ಪಿಸುತಿಪ್ಪುದೆ ।೧೨।

ಕ್ಲೇಶಾನಂದಗಳೀಶಾಧೀನ ಸಮಾಸಮ ಬ್ರಹ್ಮಸದಾಶಿವರು

ಈಶಿತವ್ಯರು ಪರೇಶನಲ್ಲದೆ ಶ್ವಾಸಬಿಡುವ ಶಕ್ತಿ ಲೇಶಿಲ್ಲೆಂಬೋದೆ ।೧೩।

ಈ ಪರಮಾತ್ಮಗೆ ರೂಪದ್ವಯವು ಪರಾಪರತತ್ತ್ವಗಳಿದರೊಳಗೆ

ಶ್ರೀಪುಂಭೇದದಿ ಈ ಪದ್ಮಾಂಡವ ವ್ಯಾಪಿಸಿ ಇಹನೆಂದೀಪರಿ ತಿಳಿವುದೆ ।೧೪।

ಏಕೋತ್ತರ ಪಂಚಾಸದ್ವರ್ಣಗಳೇಕಾತ್ಮನ ನಾಮಂಗಳವು

ಮಾ ಕಮಲಾಸನ ಮೊದಲಾದಮರರು ಸಾಕಲ್ಯದಿ ಇವನರಿಯರೆಂತೆಂಬುದೆ ।೧೫।

ಒಂದು ರೂಪದೊಳಗನಂತರೂಪಗಳು ಪೊಂದಿಪ್ಪವು ಗುಣಗಣಸಹಿತ

ಹಿಂದೆ ಮುಂದೆ ಎಂದೆಂದಿಗೂ ಶ್ರೀ ಗೋವಿಂದಗೆ ಸರಿಮಿಗಿಲಿಲ್ಲೆಂತೆಂಬುದೆ ।೧೬।

ಮೇದಿನಿಪರಮಾಣ್ವಂಬುಕಣಂಗಳ ನೈದಬಹುದು ಪರಿಗಣನೆಯನು

ಮಾಧವನಾನಂದಾದಿಗುಣಂಗಳ ನಾದಿಕಾಲದಿಂದ ಗಣಿತವೆಂಬುದೆ ।೧೬।

ಮೇದಿನಿಪರಮಾಣ್ವಂಬುಕಣಂಗಳ ನೈದಬಹುದು ಪರಿಗಣನೆಯನು

ಮಾಧವನಾನಂದಾದಿಗುಣಂಗಳನಾದಿಕಾಲದಿಂದ ಗಣಿತವೆಂಬುದೆ ।೧೭।

ಮೂಜಗದೊಳಗಿಹ ಭೂಜಲ ಖೇಚರ ಈ ಜೀವರೊಳು ಮಹೌಜಸನ

ಸೋಜಿಗ ಬಹುವಿಧ ನೈಜವಿಭೂತಿಯ ಪೂಜಿಸುತನುದಿನ ರಾಜಿಸುತಿಪ್ಪುದೆ ।೧೮।

ಹರಿಕಥೆ ಪರಮಾದರದಲಿ ಕೇಳುತ ಮರೆದು ತನುವ ಸುಖ ಸುರಿಸುತಲಿ

ಉರುಗಾಯನಸಂದರುಶನ ಹಾರೈಸಿರಳು ಹಗಲು ಜರಿಜರಿದು ಬಳಲುವುದೆ ।೧೯।

ವಿಷಯೇಂದ್ರಿಯಗಳಲಿ ತದಭಿಮಾನಿ ಸುಮನಸರಲಿ ನಿಂದು ನಿಯಾಮಿಸುವ

ಶ್ವಸನಾಂತರ್ಗತ ವಾಸುದೇವ ತಾ ವಿಷಯಗಳನು ಭೋಗಿಸುವನೆಂದರಿವುದೆ ।೨೦।

ಗುಣಕಾಲಾಹ್ವಯ ಅಗಮಾರ್ಣವ ಕುಂಭಿಣಿಪರಮಾಣ್ವಂಬುಧಿಗಳಲಿ

ವನಗಿರಿನದಿಮೊದಲಾದದರೊಳ ಗಿಂಧನಗತಪಾವಕನಂತಿಹನೆಂಬುದೆ ।೨೧।

ಅನಲಂಗಾರದೊಳಿಪ್ಪೋಪಾದಿಲಿ ಅನಿರುದ್ಧನು ಚೇತನರೊಳಗೆ

ಕ್ಷಣ ಬಿಟ್ಟಗಲದೆ ಏಕೋ ನಾರಾಯಣ ಶ್ರುತಿಪ್ರತಿಪಾದ್ಯಬ್ನು ಇಹನೆಂಬುದೆ ।೨೨।

ಪಕ್ಷ್ಮಗಳಕ್ಷಿಗಳಗಲದಲಿಪ್ಪಂತಕ್ಷರಪುರುಷನಪೇಕ್ಷೆಯಲಿ

ಕುಕ್ಷಿಯೊಳಬ್ಜಜತ್ರ್ಯಕ್ಷಾದ್ಯಮರರ ಈಕ್ಷಿಸಿ ಕರುಣದಿ ರಕ್ಷಿಪನೆಂಬುದೆ ।೨೩।

ಕಾರಣಕಾರ್ಯಾಂತರ್ಗತ ಅಂಶವ ತಾರಾವೇಶಾಹಿತ ಸಹಜ

ಪ್ರೇರಕ ಪ್ರೇರ್ಯಾಹ್ವಯ ಸರ್ವತ್ರ ವಿಕಾರವಿಲ್ಲದೆಲೆ ತೋರುವನೆಂಬುದೆ ।೨೪।

ಪ್ರತಿದಿವಸ ಶ್ರುತಿಸ್ಮೃತಿಗಳಿಂದ ಸಂಸ್ತುತಿಸುತ ಲಕ್ಷ್ಮೀಪತಿಗುಣವ

ಕೃತಿಪತಿ ಶ್ರುಷ್ಟಿಸ್ಥಿತಿಲಯ ಕಾರಣ ಇತರ ಸರ್ವದೇವತೆಗಳಲ್ಲಲ್ಲೆಂಬುದೆ ।೨೫।

ಪವನಮತಾನುಗವರನಾನೆಂತೆಂದವನಿಯೊಳಗೆ ಸತ್ಕವಿಜನರ

ಭವನಗಳಲಿ ಪ್ರತಿದಿವಸದಿ ಸುಕಥಾಶ್ರವಣ ಮಾಡುತಲಿ ಪ್ರವರನಾಗುವದೆ । ೨೬ ।

ಪನ್ನಗಾಚಲಸನ್ನಿವಾಸ ಪಾವನ್ನಚರಿತ ಸದ್ಗುಣಭರಿತ

ಅನ್ಯಜನಕಲಾವಣ್ಯಗುಣನಿಧಿ ಜಗನ್ನಾಥವಿಠಲಾನನ್ಯಪನೆಂಬುದೆ । ೨೭ ।

**ರಾಗ – ಪಂತುವರಾಳಿ ಆದಿತಾಳ**

ತಾರಕವಿದು ಹರಿಕಥಾಮೃತಸಾರ ಜನಕೆ

ಘೋರತರ ಅಸಾರ ಸಂಸಾರವೆಂಬ ವನಧಿಗೆ ನವ । ಪ ।

ಶ್ವಾನಸೂಕರಾದಿ ನೀಚಯೋನಿಗಳಲಿ ಬಂದುನೊಂದು

ವೈನತೇಯವಾಹ ಸನ್ನಿಧಾನ ಬೇಕು ಎಂಬುವರಿಗೆ । ೧ ।

ಪ್ರೀಯವಸ್ತುಗಳೊಳಗೆ ಪಾಂಡವೇಯಸಖನೆ ಎಮಗೆ ಬ್ರಹ್ಮ

ವಾಯು ಉಚ್ಚಸುರರು ತಂದೆ ತಾಯಿ ಎಂದರಿದವರಿಗೆ । ೨ ।

ಜ್ಞೇಯಜ್ಞಾನ ಜ್ಞಾತೃ ಬಾದರಾಯಣಾಖ್ಯ ಹರಿಯ ವಚನ

ಕಾಯಮನದಿ ಮಾಡ್ದ ಕರ್ಮ ಶ್ರೀಯರಸನಗೀವ ನರಗೆ । ೩ ।

ಶ್ರೀಮುಕುಂದ ಸರ್ವಮಮಸ್ವಾಮಿ ಅಂತರಾತ್ಮ ಪರಂ–

ಧಾಮ ದೀನಬಂದು ಪುಣ್ಯನಾಮ ಸಿಂಧು ತುತಿಸುವವಗೆ । ೪ ।

ಭೂತಭವ್ಯ ಭವತ್ಪ್ರಭು ಅನಾಥಬಂಧು

ಜಗನ್ನಾಥವಿಠಲ ಪಾಹಿಯೆಂದು ಮಾತುಮಾತಿಗೆಂಬುವರಿಗೆ । ೫ ।